# ಟೈಗರ್ ದಿಶಾ ಪರವಶ

ಜಾಕಿ ಶ್ರಾಫ್ ಮಗ ಟೈಗರ್ ಪರದೆ ಮೇಲೆ ಮಿಂಚದಿದ್ದರೂ ಅದರಾಚೆಗಿನ ಪ್ರೇಮಕಥೆಗಳಿಂದಲೇ ಹೆಚ್ಚು ಜನಪ್ರಿಯನಾಗುತ್ತಿದ್ದಾನೆ. ಆತನದೀಗ ದಿಶಾ ಪಟಾನಿ ಜತೆ ಹೊಸ ಲವ್ ಕಹಾನಿ ಶುರುವಾಗಿದೆ. ಈ ಜೋಡಿ ಸದಾ ತೆಕ್ಕೆ ಹಾಕಿಕೊಂಡು ಗಲ್ಲಿಗಳಲ್ಲಿ ಓಡಾಡುತ್ತಿರುತ್ತದೆ. ಬಿಟೌನ್‌ನ ಇತರೆ ಪ್ರೇಮಿಗಳಂತೆಯೇ ತಮ್ಮ ಅಫೇರ್ ಬಗ್ಗೆ ಇಬ್ಬರೂ ಬಹಿರಂಗವಾಗಿ ಮಾತನಾಡುವುದಿಲ್ಲ. ಹಾಗೆಂದು ಕದ್ದುಮುಚ್ಚಿಯೂ ಓಡಾಡುತ್ತಿಲ್ಲ. ತೆರೆಯಾಚೆಗಿನ ರೊಮ್ಯಾನ್ಸ್‌ನಿಂದ ಸುದ್ದಿಯಾಗಿದ್ದ ಈ ಜೋಡಿ ಈಗ ತೆರೆಯ ಮೇಲಿನ ರೊಮ್ಯಾನ್ಸ್‌ನಿಂದ ಕುತೂಹಲ ಹುಟ್ಟಿಸಿದೆ. 'ಬೇಫಿಕ್ರಾ' ಎಂಬ ರೊಮ್ಯಾಂಟಿಕ್ ವಿಡಿಯೊ ಆಲ್ಬಂನಲ್ಲಿ ಇಬ್ಬರೂ ನಟಿಸಿದ್ದಾರೆ.

ಮೊನ್ನೆ ಮೊನ್ನೆ ಸುದ್ದಿ ಮಿತ್ರರಿಗೆ ಈ ಜೋಡಿ ಎದುರಾಯಿತು. ದಿಶಾ ಇಬ್ಬರ ಸಂಬಂಧದ ಬಗ್ಗೆ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾಳೆ. 'ನಾವಿಬ್ಬರೂ ಒಳ್ಳೆಯ ಸ್ನೇಹಿತರು. ಒಟ್ಟಿಗೆ ಕುಣಿಯುತ್ತೇವೆ, ಒಟ್ಟಿಗೆ ಅನೇಕ ಆಟಗಳನ್ನು ಆಡುತ್ತೇವೆ. ಪರಸ್ಪರ ಹೊಂದಿಕೊಂಡಿದ್ದೇವೆ' ಎಂದಿದ್ದಾಳೆ ಆಕೆ. ಸ್ನೇಹಿತರು ಇಷ್ಟೊಂದು ಬಾರಿ ಔಟಿಂಗ್ ಹೋಗುತ್ತಾರೆಯೇ ಎಂಬ ಪ್ರಶ್ನೆಗೆ, 'ಸ್ನೇಹಿತರು ಊಟ, ಸಿನಿಮಾ ಎಂದು ಸುತ್ತಾಡುವುದು ಸಹಜ. ಇದೆಲ್ಲಾ ಸಾಮಾನ್ಯ' ಎಂದು ಹಾರಿಕೆಯ ಉತ್ತರ ನೀಡಿದ್ದಾಳೆ. 'ಒಬ್ಬರಿಗೊಬ್ಬರು ಸಮಯ ನೀಡುವುದನ್ನು ಇಬ್ಬರೂ ಇಷ್ಟಪಡುತ್ತೇವೆ' ಎನ್ನುವುದು ಟೈಗರ್ ಹೇಳಿಕೆ. ಹಾಗಾದರೆ ಈ ಸ್ನೇಹ ಮುಂದೆ ಪ್ರೀತಿಯಾಗಿ ಬದಲಾಗಬಹುದೇ? ಎಂಬ ಪ್ರಶ್ನೆಯೂ ಹುಟ್ಟಿಕೊಂಡಿತು. ಅದಕ್ಕೆ ದಿಶಾಳ ಉತ್ತರ 'ನಾನು ಅದಕ್ಕಾಗಿ ಪ್ರಯತ್ನಿಸುತ್ತೇನೆ...'!







# ಯಾಮಿ ಪುಳಕಿತ್ ಪ್ರೇಮ ಅಂತ್ಯ?

ಕೇವಲ ಒಂದು ವರ್ಷವಾಗಿತ್ತಷ್ಟೆ ಯಾಮಿ ಗೌತಮ್ ಮತ್ತು ಪುಳಕಿತ್ ಸಾಮ್ರಾಟ್ ನಡುವಣ ಪ್ರೀತಿ ಮೊಳಕೆಯೊಡೆದು. ಅದು ಗಟ್ಟಿಯಾಗಿ ಬೇರೂರುವ ಮೊದಲೇ ಒಣಗುತ್ತಿರುವ ಸುದ್ದಿ ಕೇಳಿಬಂದಿದೆ. ಇಬ್ಬರ ನಡುವೆ ಎಲ್ಲವೂ ಸರಿಯಿಲ್ಲ ಎನ್ನುವುದು ಮೂಲಗಳಿಂದ ದೃಢಪಟ್ಟಿರುವ ಸಂಗತಿ. ಕೆಲವು ವಾರಗಳಿಂದ ಇಬ್ಬರ ನಡುವೆ ಮನಸ್ತಾಪ ಉಂಟಾಗಿದೆ. ಜಗಳವೂ ಜೋರಾಗಿಯೇ ನಡೆದಿದೆ. ಕೊನೆಗೆ ಯಾಮಿ ಬೆಸುಗೆಯನ್ನು ಕಳಚಿಕೊಳ್ಳಲು ನಿರ್ಧರಿಸಿದ್ದಾಳೆ ಎನ್ನಲಾಗಿದೆ. ಇದಕ್ಕೆ ಕಾರಣ ಪುಳಕಿತ್ ತನ್ನ ವೃತ್ತಿಯನ್ನು ಸರಿಯಾದ ಹಾದಿಗೆ ತರುವಲ್ಲಿ ವಿಫಲವಾಗಿರುವುದು. ತನ್ನ ವೃತ್ತಿ ಬಗ್ಗೆ ಕಾಳಜಿಯಿಲ್ಲದ ವ್ಯಕ್ತಿಯ ಜತೆ ಸಂಬಂಧ ಮುಂದುವರಿಸಲು ಯಾಮಿಗೆ ಇಷ್ಟವಿಲ್ಲ. ಅದರ ನಡುವೆಯೇ ಆಕೆ ಬಾಲಿವುಡ್‌ನಲ್ಲಿ ಒಳ್ಳೆಯ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದಾಳೆ. ಹೃತಿಕ್ ರೋಷನ್ ಜತೆ 'ಕಾಬಿಲ್'ನಲ್ಲಿ ತೆರೆ ಹಂಚಿಕೊಳ್ಳುವ ಅವಕಾಶ ಆಕೆಗೆ ದೊರೆತಿದೆ. ಹೀಗಾಗಿ ಯಾಮಿಯ ಗುರಿ ಮತ್ತು ನಡೆ ಬದಲಾಗಿದೆ ಎನ್ನಲಾಗುತ್ತಿದೆ.

ಪುಳಕಿತ್‌ನೊಂದಿಗಿನ ಸಂಬಂಧ ತನ್ನ ವೃತ್ತಿ ಬದುಕಿನ ಯಶಸ್ಸಿಗೆ ಅಡ್ಡಿಯಾಗಲಿದೆ ಎಂದು ಯಾಮಿ ಭಾವಿಸಿದ್ದಾಳೆ. ಅಲ್ಲದೆ, ಪುಳಕಿತ್ ತನ್ನ ಪತ್ನಿ ಶ್ವೇತಾ ರೋಹಿರಾಳಿಂದ ವಿಚ್ಛೇದನವನ್ನೂ ಪಡೆದಿಲ್ಲ. ಹೀಗಾಗಿ ಈ ಪ್ರೀತಿ ಗಟ್ಟಿಯಾಗಿ ಉಳಿಯುವ ಅಥವಾ ಅದರಿಂದ ತನ್ನ ವೃತ್ತಿಗೆ ಪೂರಕವಾಗುವ ಯಾವುದೇ ಲಕ್ಷಣಗಳಿಲ್ಲ ಎನ್ನುವುದು ಆಕೆಯ ಲೆಕ್ಕಾಚಾರ. ಯಾಮಿಯ ಮನವೊಲಿಸಲು ಪುಳಕಿತ್ ಮುಂದಾಗುತ್ತಾನಾ ಎಂಬುದನ್ನು ಕಾದು ನೋಡಬೇಕು. ಆದರೆ, ಯಾಮಿ ಮಾತ್ರ ಮತ್ತೆ ತಿರುಗಿ ನೋಡುವುದಿಲ್ಲ ಎಂದು ದೃಢನಿರ್ಧಾರ ತೆಗೆದುಕೊಂಡಿದ್ದಾಳಂತೆ.

ಯಾಮಿ ಮತ್ತು ಪುಳಕಿತ್,_ ಎರಡು ಸಿನಿಮಾಗಳಲ್ಲಿ ಒಟ್ಟಿಗೆ ನಟಿಸಿದ್ದಾರೆ. ಇಬ್ಬರ ಪ್ರೇಮ ವ್ಯವಹಾರವೂ ಜಗಜ್ಜಾಹೀರು. ಹಾಗಂತ ಅದರ ಕುರಿತು ಇಬ್ಬರೂ ಬಹಿರಂಗವಾಗಿ ಮಾತನಾಡಿದವರಲ್ಲ. ಇಬ್ಬರ ಪ್ರೀತಿಯೂ ಒಂದು ಸಿನಿಮಾ ಕಥೆಯಂತಿದೆ ಎನ್ನುತ್ತಿದೆ ಬಿಟೌನ್.